# 29ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ
# ಬೆಂಗಳೂರು ನಗರ

ಸಿ.ಸಿ.ನಂ. 70892/2025

ಪಿಡಬ್ಲೂ.2 ದಿನಾಂಕ: 07.02.2026

ಸಿಡಬ್ಲೂ.3 ಪ್ರಮಾಣೀಕರಿಸಲಾಯಿತು.

| | |
|---|---|
| ಹೆಸರು | ಮಾಧವ್ ಕುಮಾರ್ |
| ತಂದೆ ಹೆಸರು | ಅನಿಲ್ ಕುಮಾರ್ |
| ವಯಸ್ಸು | 25 ವರ್ಷಗಳು |
| ಉದ್ಯೋಗ | ಖಾಸಗಿ ಕೆಲಸ |
| ವಿಳಾಸ | ಮಾರತಹಳ್ಳಿ, ಬೆಂಗಳೂರು. |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತುಃ**

**ಮುಖ್ಯ ವಿಚಾರಣೆ ಹಿ.ಸ.ಸ.ಅ. ರವರಿಂದಃ-**

ಆರೋಪಿ ಪರಿಚಯವಿದ್ದಾರೆ. ಚಾ.ಸಾ. 1 ಮತ್ತು 2 ನನ್ನ ಸ್ನೇಹಿತರು. ನಮ್ಮ ಮತ್ತು ಆರೋಪಿಯ ನಡುವೆ ಆದ ಬಾಯಿ ಮಾತಿನ ಗಲಾಟೆಯ ವಿಚಾರವಾಗಿ ಚಾ.ಸಾ. 1 ರವರು ದೂರನ್ನು ನೀಡಿದ್ದು. ಆರೋಪಿ ನನಗೆ ಹಲ್ಲೆ ಮಾಡಿರುವದಿಲ್ಲ, ನಾನು ಚಿಕಿತ್ಸೆ ಪಡೆದಿರುವುದಿಲ್ಲ, ಜೀವದ ದಮಕಿ ಹಾಕಿರುವದಿಲ್ಲ. ಅವಾಚ್ಯ ಶಬ್ದಗಳಿಂದ ಬೈದಿರುವದಿಲ್ಲ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಪೋಟೋಗಳು ಮತ್ತು ದಾಖಲಾತಿಗಳನ್ನು ನೋಡಿ ಗುರುತಿಸಿರುವದಿಲ್ಲ. ಪೋಲೀಸರ ಮುಂದೆ ಯಾವುದೇ ಹೇಳಿಕೆ ಹೇಳಿರುವದಿಲ್ಲ.

**(ಈ ಹಂತದಲ್ಲಿ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಹಿ.ಸ.ಸ.ಅ ರವರು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು).**

ಪಾಟೀ ಸವಾಲು ಹಿ.ಸ.ಸ.ಅ ರವರಿಂದಃ.

ಆರೋಪಿ ಆಗ್ರಹಾರ ಬಳಿ ಇರುವ ಎಲ್ಲೊ ಕೊಲಿವಿಂಗ್ ಪಿ.ಜಿ ಯಲ್ಲಿ ವಾಸವಿದ್ದ ಸಮಯದಲ್ಲಿ ಚಾ.ಸಾ.1 ರವರನ್ನು ಪರಿಚಯ ಮಾಡಿಕೊಂಡು, love proposal ಇಟ್ಟಿದ್ದು

ನಾನು ನಿರಾಕರಿಸಿದ್ದು ನಂತರ ಚಾ.ಸಾ.1 ರವರಿಗೆ ಕರೆ ಮಾಡಿ love ಮಾಡುವಂತೆ ಒತ್ತಾಯ ಮಾಡಿದ್ದಾನೆ ಎಂದರೆ ಸರಿಯಲ್ಲ. ನಂತರ ಚಾ.ಸಾ.1 ರವರ ಆಪೀಸ್ ಬಳಿ ಬಂದು ಇಲ್ಲಸಲ್ಲದ ಚಾ.ಸಾ.1 ರವರ ಬಗ್ಗೆ ಚಾಡಿ ಮಾತುಗಳನ್ನು ಹೇಳಿದ್ದಾನೆ ಎಂದರೆ ಸರಿಯಲ್ಲ. ಅದರಂತೆ ಚಾ.ಸಾ.1 ರವರು ಮಾರತಹಳ್ಳಿಯ ಲೋಕಲ್ ಸ್ಟೊರ್ ಪಿ.ಜಿ. ಗೆ ಸಿಪ್ಟ್ ಆಗಿ, ದಿಃ 10.05.2025 ರಂದು ರಾತ್ರಿ 08.30 ಸಮಯಕ್ಕೆ ಚಾ.ಸಾ.1 ರವರ ಪಿ.ಜಿ. ಬೆಸ್ ಮೆಂಟ್ ಬಳಿ ನಿಂತಾಗ, ಒಳಗೆ ಬರುತ್ತಿದ್ದಂತೆ ಆರೋಪಿ ಚಾ.ಸಾ.1 ರವರವರನ್ನು ಒತ್ತಾಯ ಪೂರಕವಾಗಿ ಮಾತನಾಡಿಸಿ ಅಡ್ಡಗಟ್ಟಿ, ಚಾ. ಸಾ.2 ಮತ್ತ ನನಗೆ ಮತ್ತು ಚಾ.ಸಾ.1 ರವರಿಗೆ ಕೈಗಳಿಂದ ಹಲ್ಲೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದು ಪ್ರಾಣ ಬೇದರಿಕೆ ಹಾಕಿದಾದ್ದನೆ ಎಂದರೆ ಸರಿಯಲ್ಲ. ಈಗ ಓದಿ ಹೇಳಿದಂತೆ ದಿಃ 11.05.2025 ರಂದು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಅದನ್ನು ನಿಪಿ.6 ಎಂದು ಗುರುತಿಸಲಾಯಿತು. ಪ್ರಕರಣವನ್ನು ಆರೋಪಿತನೊಂದಿಗೆ ರಾಜಿ ಮಾಡಿಕೊಂಡಿದ್ದೇನೆ ಎಂದರೆ ಸರಿ. ಆ ಕಾರಣದಿಂದಾಗಿ ನಿ.ಪಿ.6 ರಲ್ಲಿ ಬರೆದಿರುವ ವಿಚಾರಗಳು ಗೊತ್ತಿದ್ದರೂ ಸಹ ಗೊತ್ತಿಲ್ಲವೆಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ.** ಇಲ್ಲ.

**ಮರುವಿಚಾರಣೆ**ಃ ಇಲ್ಲ

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇದೆ

29ನೇ ಅ.ಮು.ಮ.ದಂ.ನ್ಯಾ,
ಬೆಂಗಳೂರು